# ಅಧ್ಯಾಯ 26

ಓಂ ಗಣೇಶಾಯ ನಮಃ    ಸದ್ಗುರು ಸಿದ್ಧಾರೂಢ ನಮಃ



| ಛಂದ | ಜಯತು ಜಯ ಗುರು ಸಿದ್ಧರಾಯನೆ ಶಾಂತಿಗುಣ ಸಮ್ಮೂರ್ತಿಯೇ
ನಯದಿ  ಸಹಿಸುತ ದುರ್ಜನರ ಪೀಡೆಯನವರ ಹಿತ ಬಯಸಿಯೆ
ಭಜಕ ಜನರಾರ್ತಿಯನು ಪಾಲಿಸಿ ಕುಳಿತು ರಥದೊಳು ಮೆರೆಯುವಿ ತ್ಯಜಿಸಿ
ಸುಖದುಃಖವನು ನೀ ನಿತ್ಯಾತ್ಮಧ್ಯಾನದಿ ಸುಖಿಸುವಿ :-

ಶ್ರೀ ಸದ್ಗುರು ಸಿದ್ಧರಾಯನೇ, ನಿನಗೆ ಜಯ ಜಯಕಾರವಿರಲಿ. ನೀನೇ ಅನಂತ ಬ್ರಹ್ಮಾಂಡಗಳನ್ನೆಲ್ಲಾ ವ್ಯಾಪಿಸಿಕೊಂಡಿದ್ದರೂ ಭಕ್ತಕಾರ್ಯಕೊಸ್ಕರ ಸಗುಣ ರೂಪವನ್ನು ಧಾರಣ ಮಾಡಿ, ಈ ಲೋಕದಲ್ಲಿ ಬಂದಿರುತ್ತಿ. ನೀನು ದೇಹತ್ರಯಗಳಿಗೂ ವಿಲಕ್ಷಣನಿದ್ದು, ಸರ್ವ ಸಾಕ್ಷಿಯಾಗಿರುತ್ತಿ. ನಿನ್ನ ಭಜಿಸುವವರಿಗೆ ನೀನು ಅಭಿನ್ನನಾಗಿದ್ದರೂ, ಯಾರೂ ನಿನ್ನ ರೂಪವನ್ನು ತಿಳಿಯಲಾರರು. ಪೂರ್ಣಾವತಾರಿಗಳಾದ ಸದ್ಗುರು ಸಿದ್ಧರಾಯರು, ಭಕ್ತರ ಭಯಗಳನ್ನು ತಪ್ಪಿಸುವರು. ಆದರೆ ಸ್ವಶರೀರಕ್ಕೆ ಏನಾದರೂ ಅಪಾಯಗಳು ಪ್ರಾಪ್ತವಾದರೆ, ಅವುಗಳನ್ನು ತಪ್ಪಿಸುವ ಉಪಾಯ ಮಾಡುವದಿಲ್ಲ,. ತಮ್ಮ ಶರೀರವನ್ನು ಯಾರು ಪೀಡಿಸುವರೋ ಅವರ ಮೇಲೆ ಸಿದ್ಧರು ಹೆಚ್ಚಿನ ದಯಾ ಮಾಡುತ್ತಾರೆ. ಅಂಥವರಿಗೆ ಹಾನಿಯಾಗಬಾರದೆಂದು ತಾವು ಯತ್ನಿಸುವರು. ಯಾಕೆಂದರೆ ಅಜ್ಞಾನದಿಂದ ಆರಿಸಲ್ಪಟ್ಟ ಜೀವರೆಲ್ಲರೂ ಸಣ್ಣ ಮಕ್ಕಳಂತೆ ಇರುವರು. ಅಂಥ ಚಿಕ್ಕ ಮಕ್ಕಳ ಅಪರಾಧಗಳನ್ನು ತಂದೆ ತಾಯಿಗಳು ಹ್ಯಾಗೆ ಕ್ಷಮಿಸುವರೊ ಮತ್ತು ಅವರು

ಅಜ್ಞಾನಿಗಳಂತೆ ಅವರಿಗೆ ಹೆಚ್ಚಿನ ದಯೆಯಿಂದ ಬುದ್ಧಿ ಕಲಿಸುವರೋ ಹಾಗೆ ದಯಾಳುವಾದ ಜ್ಞಾನಿಗಳು ಅಜ್ಞಾನಿ ಜೀವರನ್ನು ಕ್ಷಮಿಸಿ, ಸನ್ಮಾರ್ಗಕ್ಕೆ ಹಚ್ಚುವರು. ಸದ್ಗುರುವು ಸರ್ವ ಜಗತ್ತನ್ನು ಆತ್ಮರೂಪವಾಗಿ ನೋಡುತ್ತಿದ್ದು, ಆತನಿಗೆ ತನ್ನದು ಪರರದು ಎಂಬ ಭೇದಗಳು ಕಾಣಿಸುವದಿಲ್ಲ. ಯಾರಾದರೂ ತನಗೆ ದುಃಖಕೊಟ್ಟರೆ, ಆತನು ನನ್ನವನೇ ಎಂದು ತಿಳಿದುಕೊಂಡು, ಆತನ ಮೇಲೆ ದಯಾಬುದ್ಧಿ ಮಾಡುವನು. ತನ್ನ ಶರೀರಕ್ಕೆ ಏನು ದುಃಖ ಬರುವುದೋ ಅದನ್ನು ಆತನು ಪ್ರಾರಬ್ಧಕ್ಕೆ ಹಚ್ಚುವನು. ಇದರಲ್ಲಿ ದುಃಖ ಕೊಡುವವನದೇನೂ ದೋಷವಿಲ್ಲೆಂದು ತಿಳಿಯುವನು. ತಾನು ಶರೀರದಿಂದ ದುಃಖ ಭೋಗಿಸುವ ಮೂಲಕ ಪ್ರಾರಬ್ದವು ಬೇಗನೇ ಕ್ಷೀಣವಾಗಿ ಹೋಗುವದೆಂದು ಜ್ಞಾನಿಯಾದವನು ತಿಳಿದು, ಅದರ ಸಮ್ಮಂಧ ಉದ್ವಿಗ್ನನಾಗಿ ಪ್ರತೀಕಾರ ಮಾಡನು; ಯಾಕೆಂದರೆ ಅದು ಸಂಚಿತವಾಗಿ ಕೂಡ್ರುವದೆಂದು ಬಲ್ಲನು. ಹೀಗಂದು ಜ್ಞಾನಿಯೂ ಪ್ರಾರಬ್ಧ ದುಃಖವನ್ನು ಸುಮ್ಮನೆ ಸಹನ ಮಾಡುವನು, ಇಲ್ಲದಿದ್ದರೆ ಅದು

ಸಂಚಿತವಾಗಿ ಪುನರ್ಜನ್ಮಕ್ಕೆ ಕಾರಣವಾಗುವದು. ತನ್ನ ಪೀಡಿಸುವಂಥವರ ಮೇಲೆ ದಯಾಯುಕ್ತನಾಗಿರುವದು, ಸಿದ್ಧರಿಗೆ ಸ್ವಭಾವಿಕವಾಗಿದೆ. ಆದ್ದರಿಂದಲೇ ಅವರಿಗೆ ಜ್ಞಾನಿಗಳೆನ್ನುವರು. ಇದರ ದೃಷ್ಟಾಂತವನ್ನು ಶ್ರವಣ ಮಾಡುವಂಥವರಾಗಿರಿ. ಒಂದಾನೊಂದು ಕಾಲದಲ್ಲಿ ದಯಾಘನರಾದ ಸಿದ್ಧರು ಕಟ್ಟೆಯ ಮೇಲೆ ಧ್ಯಾನಸ್ಥರಾಗಿ ಕುಳಿತಿದ್ದರು. ಆ ಸಮಯದಲ್ಲಿ ಮಠದೊಳಗೆ ಯಾರು ಇದ್ದಿರಲಿಲ್ಲ. ಆಗ ಆರೂ ಮಂದಿ ಯುವನರು ಮದ್ಯಪಾನದಿಂದ ಮತ್ತರಾಗಿದ್ದು ಸಿದ್ಧರಿಗೆ ಏನಾದರೂ ಪೀಡೆ ಮಾಡುವ ಉದ್ದೇಶದಿಂದ ಅವರ ಹಿಂದಿನಿಂದ ಬಂದರು. ಒಬ್ಬನು ಅಕಸ್ಮಾತ್ತಾಗಿ ಸಿದ್ಧರಿಗೆ ದೂಡಿಬಿಟ್ಟನು. ಅವರು ಕಟ್ಟೇ ಮೇಲಿಂದ ಕೆಳಗೆ ಬಿದ್ದರು. ಆದರೆ ಸಿದ್ಧರು ಅವರ ಕಡೆಗೆ ನೋಡದೆ ಪುನಃ ಎದ್ದು ಮೊದಲಿನಂತೆ ಕಟ್ಟೆ, ಮೇಲೆ ಕುಳಿತಿರು. ಹ್ಯಾಗೆ ಗಿಡದ ಟೊಂಗೆಯನ್ನು ನುಗಿಸಲಾಗಿ ಅದು ತನಗೆ ಯಾರು ಅಲ್ಲಾಡಿಸುವರೆಂಬುದನ್ನು ವಿಚಾರಿಸಿದೆ ಮೊದಲಿನಂತೆ ಇರುವುದೋ ಹಾಗೆಯೇ ಸಿದ್ಧಾರೂಢರು

ಕುಳಿತವರು. ಇದನ್ನು ನೋಡಿ ಅವರು ಅಧಿಕವಾಗಿ ಸಿಟ್ಟಿಗೆದ್ದು, ಮತ್ತೊಬ್ಬನು ಸಿದ್ಧರ ಕೈ ಹಿಡಿದು ಬಲಾತ್ಕಾರದಿಂದ ಎಳೆದನು. ಆಮೇಲೆ ಅವರೆಲ್ಲರೂ ಸಿದ್ಧರ ಸಮೀಪ ಬಂದು - "ಎಲೇ ಹುಚ್ಚಾ, ನಿನಗೆ ಮದ್ಯಪಾನ ಮಾಡಿಸಿ, ಆನಂದ ಕೊಡುವೆವು. ಒಲ್ಲೆ ಎಂಬುವ ಮಾತು ನಮ್ಮ ಹತ್ತಿರ ಎಂದೂ ನಡಿಯಲಿಕ್ಕಿಲ್ಲ ನೋಡು." ಎಂದು ಆ ಆರೂ ಜನರು ಅವರು ಸುತ್ತಲೂ ಕೂತುಕೊಂಡರು. ಸಿದ್ಧರನ್ನು ನಡುವೆ ಕೂಡ್ರಿಸಿ ಕಿಸೆಯೊಳಗಿಂದ ಮದ್ಯದ ಬಾಟ್ಲಿಯನ್ನು ತೆಗೆದು, ಸಿದ್ಧರನ್ನು ಕುರಿತು, ಅವರಲ್ಲೊಬ್ಬನು - "ನೀನು ಸತ್ಯವಾಗಿ ಹುಚ್ಚನಿದ್ದಿಯಾದರೆ, ನೀನು ಶರೆ ಕುಡಿಯಬೇಕು. ಕುಡಿದರೆ ನಿನ್ನದೇನು ಹೋಗುವುದು ?" ಎಂದು ಕಾಲಿನಿಂದ ಒದ್ದು ಬಿಟ್ಟನು. ಸಿದ್ಧರು ಮದ್ಯಪಾನ ಒಲ್ಲರೆಂದರು. ಅವರ ಮೈಮೇಲೆ ಅವರೆಲ್ಲರೂ ತುಳಿಯಲಾರಂಭಿಸಿದರು. ಸಿದ್ಧರಾದರೂ,ಅವರು ಏನು ಮಾಡಿದರೂ ತಳಮಳಿಸದೆ, ಶಾಂತ ಸ್ಥಿತಿಯಲ್ಲಿ ಇದ್ದರು. ಒಬ್ಬನು ಒಂದು ಕಟ್ಟಿಗೆಯಿಂದ ಹೊಡೆಯುತ್ತಿದ್ದನು. ಮತ್ತೊಬ್ಬನು ಕಣ್ಣು ಕುಕ್ಕಲಿಕ್ಕೆ ನೋಡುತ್ತಿದ್ದನು. ಒಬ್ಬನು ಸಿದ್ಧರ

ಮಸ್ತಕದ ಮೇಲೆ ತುಳಿಯುತ್ತಿದ್ದು. ಇಷ್ಟಾದರೂ ಸಿದ್ಧರು ಸ್ವಸ್ಥ ಚಿತ್ತರಾಗಿ ಕುಳಿತಿದ್ದರು. ಸಿದ್ದರಿಗೆ ಕ್ರೋಧ ದೃಷ್ಟಿಯೆಂಬುದು ಎಂದೆಂದೂ ಇಲ್ಲದೆ, ಅವರು ಶಾಂತ ದೃಷ್ಟಿಯಿಂದ ಆ ಯವನರ ಕಡೆಗೆ ನೋಡುತ್ತಿದ್ದರು. ಇವರ ಶಾಂತಿಯನ್ನು ನೋಡಿ, ಸಿಟ್ಟಿಗೆಬ್ಬಿಸಬೇಕೆಂಬ ಛಲ ಹಿಡಿದು, ಆ ಮುಸಲ್ಮಾನರು ಮತ್ತಷ್ಟು ಹುರುಪಾಗಿ ಸಿದ್ಧರನ್ನು ಪೀಡಿಸುವಂಥವರಾದರು. ಹೀಗಿರುತ್ತಾ ಕೆಲವು ಹೊತ್ತಿನ ಮೇಲೆ ಸಿದ್ದರು ದಯಾಭರಿತರಾಗಿ ಅವರ ಕಡೆಗೆ ನೋಡಿ, -"ನೀವು ಬಹಳ ಉತ್ತಮ ಕಾರ್ಯವನ್ನು ಮಾಡುತ್ತಿರುವಿರಿ, ಈ ಪ್ರಕಾರ ನಡಿಸುವವರು ಈ ಲೋಕದಲ್ಲಿ ಬಹಳೇ ಕಡಿಮೆ ಮಂದಿ ಸಿಗುವರು. ನಿಮ್ಮ ಕಡೆಯಿಂದ ಇಂಥಾ ಉಪಕಾರವನ್ನು ಪಡೆದು, ನಿಮಗೆ ಹಾನಿ ಬರುವಂತೆ ಮಾಡಬಾರದೆಂದು ಹೇಳುತ್ತೇನೆ ಕೇಳಿರಿ. ಈಗ ಊರೊಳಗಿಂದ ಭಕ್ತ ಜನರು ಬರುವರು. ನಿಮ್ಮ ಈ ಉದ್ಯೋಗವನ್ನು ಅವರು ನೋಡಿದರೆ, ನಿಮಗೆ ಘಾತ ಮಾಡುವರು. ಅದರಿಂದ ನನಗೆ ದುಃಖ ಅನಿಸುವದು, ಆದ್ದರಿಂದ ನಾನು ಹೇಳುವುದೇನೆಂದರೆ ನೀವು

ಈಗಿಂದೀಗಲೇ ಹೊರಟು ಹೋಗಿರಿ. ನೀವು ಅವರ ದೃಷ್ಟಿಗೆ ಬಿದ್ದಿರೆಂದರೆ, ನಿಮಗೆ ನಿಶ್ಚಯವಾಗಿ ಘಾತವಾಗುವದು. ನಾಳೆ ಇಷ್ಟೇ ಹೊತ್ತಿಗೆ ಇಲ್ಲಿಗೆ ಬಂದು, ನೀವು ನನಗೆ ಯಥೇಷ್ಟವಾಗಿ ಹೊಡೆಯಿರಿ. ಈಗ ಬೇಗನೇ ನಡೆಯಿರಿ", ಎಂದು ಅವರನ್ನು ದೂಡುವಂಥವರಾದರು. ಆ ಯವನರು ಮದ್ಯಪಾನದಿಂದ ಉನ್ಮತ್ತರಾಗಿ- 'ಎಲೈ ಹುಚ್ಚಾ, ಏನು ಅನ್ನುತ್ತಿಯೋ, ನಿನ್ನನ್ನು ಪೂರಾ ಕೊಂದೇ ನಾವು ಹೋಗುವೆವು', ಎಂದು ಸಿದ್ಧರನ್ನು ಕೊಲ್ಲುವ ಉದ್ದೇಶದಿಂದ ಒಂದು ದೊಡ್ಡದಾದ ಕಲ್ಲು ಹೊತ್ತುಕೊಂಡು ಬಂದರು. ಇಷ್ಟರೊಳಗೆ ಜನರು ಮಾತನಾಡುವ ಸಪ್ಪಳವು ಸಮೀಪವೇ ಕೇಳಿ, ಅವರು ಕಲ್ಲು ಒಗೆದು, ಓಡಿಹೋಗಿ, ಯಾರಿಗೂ ಕಾಣಿಸದಂತೆ ನಿಂತು ನೋಡುತ್ತಿದ್ದರು. ಆ ಭಕ್ತ ಜನರು ಸಿದ್ಧರನ್ನು ನೋಡಿ ಅವರ ಮುಂದೆ  ಸಾಷ್ಟಾಂಗ ಹಾಕುತ್ತಿರುವದನ್ನು ಯವನರು ನೋಡುತ್ತಿದ್ದರು. ಆಗ ದಯಾಪೂರ್ಣರಾದ ಸಿದ್ಧಾರೂಢರನ್ನು ಕುರಿತು ಆ ಭಕ್ತ ಜನರು - "ಹೇ ಮಹಾಸ್ವಾಮೀ, ಕೃಪಾ ಮೂರ್ತಿ, ನಮ್ಮ ದೀನ ವಚನವನ್ನು ಶ್ರವಣ ಮಾಡಬೇಕು.

ಇವತ್ತು ಕಾಳಮ್ಮನ ರಥೋತ್ಸವ ಮಾಡಬೇಕೆಂದು ರಥವನ್ನು ಶೃಂಗರಿಸಿ, ಊರೊಳಗೆ ನಿಂದಿರಿಸಿದೆವು. ಕಾಳಮ್ಮನ ಮೂರ್ತಿಯನ್ನು ಅಲಂಕರಿಸಿ, ರಥದ ಮೇಲೆ ಸ್ಥಾಪಿಸಿದೇವು. ಆದರೆ ಎಷ್ಟು ಪ್ರಯತ್ನ ಪಟ್ಟು, ರಥವನ್ನು ಎಳೆದರೂ, ರಥವು ಅಲಗಾಡುವುದಿಲ್ಲ. ಆಗ ಒಬ್ಬ ಗೃಹಸ್ಥನು ಬಂದು, ಮಹಾತ್ಮರ ಸನ್ನಿಧಿ ವಿನಹಾ ರಥ ನಡಿಯಲಾರದು ಎಂದು ಅಂದದ್ದು ಕೇಳಿ, ನಾವು ತಮ್ಮ ಕಡೆಗೆ ಬಂದಿರುತ್ತೇವೆ.- ನೀವು ಸತ್ಯವಾಗಿ ಮಹಾತ್ಮರೇ ಇದ್ದೀರಿ, ಅಲ್ಲಿ ತನಕ ಬರುವಂಥವರಾದಿರಂದರೆ ಬಹಳ ಉತ್ತಮವಾಗುವದು. ಆದ್ದರಿಂದ ನೀವು ನಮ್ಮ ಮೇಲೆ ಕೃಪಾಮಾಡಿ, ನಮ್ಮ ಮನೋರಥವನ್ನು ಪೂರ್ಣ ಮಾಡಬೇಕು." ಎಂದು ಆ ಭಕ್ತರು ಅಂದದ್ದು ಕೇಳಿ, ಕೃಪಾನಿಧಿಯಾಗಿರುವ ಸಿದ್ಧಾರೂಢರು, ಅವರನ್ನು ಕುರಿತು - "ನೀವು ಇಚ್ಛೆಸಿದ ಪ್ರಕಾರ ಮೊದಲು ಆಗಲಿ. ಆಮೇಲೆ ನಾನು ಮಠಕ್ಕೆ ಮರಳಿ ಬಂದು, ರಾತ್ರಿ ಕಾಲದಲ್ಲಿ ಇಲ್ಲೇ ಇರುವೆನು', ಅಂದರು. ಈ ಸಂಭಾಷಣವನ್ನೆಲ್ಲಾ ಕೇಳಿದ ಆ ಯುವನರು ತಮ್ಮೊಳಗೆ - "ಈ ಮಂದಿಗೆ ಏನು ಭ್ರಮೆ ಹತ್ತಿದೆ. ಈ ಹುಚ್ಚನಿಗೆ

ಮಹಾತ್ಮ ಅಂದು, ರಥ ನಡಿಸಲಿಕ್ಕೆ ಈತನನ್ನು ಕರೆದುಕೊಂಡು ಹೋಗುತ್ತಾರಂತೆ. ನಾವಾದರೂ, ಇವನನ್ನು ಕರೆದುಕೊಂಡು ಹೋಗಿ ಇವರು ಏನು ಮೋಜು ಮಾಡುತ್ತಾರೆ, ನೋಡೇ ಬಿಡೋಣ, ನಮ್ಮ ವೃತ್ತಾಂತವನ್ನು ಯಾರಿಗೂ ಹೇಳದೆ ರಥದ ಕಡೆಗೆ ಹೋಗೋಣ" ಎಂದು ತಮ್ಮೊಳಗೆ

ಅನ್ನುವಂಥವರಾದರು. ಶ್ರೀ ಸಿದ್ಧರನ್ನು ಕರೆದುಕೊಂಡು ಭಕ್ತರು ಹೋಗುತ್ತಿರುವಾಗ್ಗೆ ಹಿಂದಿನಿಂದ ಯವನರು ನಡೆಯುತ್ತಿದ್ದರು. ಹಳೆ ಹುಬ್ಬಳ್ಳಿಯಲ್ಲಿ ರಥವನ್ನು ಶೃಂಗಾರಿಸಿ ರಸ್ತೆಯ ಮೇಲೆ ನಿಂದಿರಿಸಿದ್ದರು. ನೂರಾರು ಮಂದಿ ಅದನ್ನು ಬಹು ರೀತಿಯಿಂದ ಎಳೆದರೂ ಅದು ಅಲ್ಲಾಡದಿರುವದು. ಸಿದ್ಧರನ್ನು ಭಕ್ತರು ಕರೆದುಕೊಂಡು ಹೋಗಿ, ಒಂದು ಮನೆಯ ಕಟ್ಟೆಯ ಮೇಲೆ ಕೂಡ್ರಿಸಿದರೂ. ಎಂಟು ಜನರಿಗೆ ಸಹಜವಾಗಿ ಎಳಯಲಿಕ್ಕೆ ಬರುವಂಥಾ ರಥವನ್ನು

ಈಗ ಸದ್ಗುರು ಸನ್ನಿಧಿಯಲ್ಲಿ, ನೂರಾರು ಮಂದಿ, ಎಳೆಯುವಂಥವರಾದರು. ಆದರೂ ರಥವು ಪರ್ವತದಂತೆ ಅಚಲವಾಗಿತ್ತು. ಇದನ್ನು ನೋಡಿ, ಭಕ್ತ ಜನರು ಬಹಳ

ಖಿನ್ನರಾದರು. ಆ ಯುವನರು ತಮ್ಮ ತಮ್ಮೊಳಗೆ....." ಈ ಮಂದಿಗೆ ಹುಚ್ಚು ಹಿಡಿದಿದೆ. ಈ ಹುಚ್ಚನಿಗೆ ಇಂಥಾ ಶಕ್ತಿ ಇರುವುದು ಸತ್ಯಾವದರೆ, ನಾವು ಹೊಡಿಯುತ್ತಿರುವಾಗ ಈತನು ಯಾಕೆ ಸುಮ್ಮನೆ ಇರುತ್ತಿದ್ದನು ? "ಈತನು ಮಹಾತ್ಮನೆಂಬುವುದು ಸತ್ಯವು' ಅದಕ್ಕೆ ಮತ್ತೊಬ್ಬನು, 'ಹಾಗಾದರೆ ಇವನ ಮುಂದೆ ರಥ ಯಾಕೆ ನಡಿಯಲಾರದು ?" ಎಂದು ನಾನಾ ಪ್ರಕಾರದ ಜನರು ತಮ್ಮ ತಮ್ಮೊಳಗೆ ಅನ್ನುತ್ತಿರುವರು. ಆ ಸಮಯದಲ್ಲಿ, ಯಾವಾತನು, ಮಹಾತ್ಮರ ಸನ್ನಿಧಿಯಲ್ಲಿ ರಥ ನಡಿಯುವದೆಂದು ಅಂದಿದ್ದನೋ, ಆ ಗೃಹಸ್ಥನು ಬಂದು, ಆ ಖಿನ್ನ ಮನಸ್ಕರಾದ ಜನರನ್ನು ಕುರಿತು - "ನೀವು ನಾನು ಅಂದಂತೆ ಮಾಡಲಿಲ್ಲ. ಮಹಾತ್ಮರ ಸನ್ನಿಧಿಯೆಂದರೆ, ಅವರನ್ನು ಸದ್ಭಕ್ತಿಯಿಂದೊಡಗೂಡಿ, ರಥದ ಮೇಲೆ ಕೂಡ್ರಿಸಿ, ಭಜನೆ ಮಾಡುತ್ತಾ, ರಥವನ್ನು ಎಳೆದರೆ, ರಥವು ನಡೆಯುವುದು, ನೋಡಿರಿ", ಎಂದು ಹೇಳಿದನು. ಈ ಮಾತು ಕೆಲವರ ಮನಸ್ಸಿಗೆ ಬಂದಿಲ್ಲ, ಅವರು - "ಕಾಳಮ್ಮನನ್ನು ಬಿಟ್ಟು, ಅವರನ್ನು ರಥದಲ್ಲಿ ಕುಳ್ಳಿರಿಸಿದರೆ,

ನಮ್ಮ ಮೇಲೆ ಆ ದೇವಿಯು ಕ್ಷೋಭೆಗೊಳ್ಳುವಳು'. ಎಂದು ಹೇಳಿದರು. ಅದಕ್ಕೆ ಆ ಗೃಹಸ್ಥನು - ಹಾಗಾದರೆ ನಿಮಗೆ ಹೇಳುತ್ತೇನೆ ಕೇಳಿರಿ. ನಿನ್ನೆ ನನ್ನ ಸ್ವಪ್ನದಲ್ಲಿ ಬಂದು ಕಾಳಮ್ಮ - "ನೀವು ನಾಳೆ, ಸಿದ್ಧರನ್ನು ಕೂಡ್ರಿಸದೆ ರಥ ಎಳೆಯಲಿಕ್ಕೆ ನೋಡಿದರೆ, ನಾನು ಅದನ್ನು ನಡಿಯಲಿಕ್ಕೆ ಬಿಡೆನು", ಎಂದು ಹೇಳಿದ್ದರೂ, ನನ್ನ ಮನಸ್ಸಿನಲ್ಲಿ ಸಂಶಯವಿತ್ತು. ಆದರೆ ಇವತ್ತು ರಥವು ನಡೆಯದೆ ಇದ್ದದ್ದನ್ನು ನೋಡಿ, ಸ್ವಪ್ನವು ಸತ್ಯವೆಂದು ತಿಳಿದುಕೊಂಡೆನು. ಈ ಪ್ರಕಾರ ಕಾಳಮ್ಮನ ಆಜ್ಞೆ ಆಗಿರುವದರಿಂದ, ಆ ದೇವಿಯ ಆಜ್ಞೆಯನ್ನು ನಡಿಸುವದರಿಂದ ಏನೇನೂ ಭಯವಿಲ್ಲ. ಎರಡನೇ ಉಪಾಯವೇ ಇಲ್ಲ" ಅಂದನು. ಈ ವಚನವು ಎಲ್ಲರಿಗೂ ಮಾನ್ಯವಾಯಿತು. ಅನಂತರ ಸಿದ್ಧಾರೂಢರಿಗೆ ವಿವಿಧ ಭೂಷಣಗಳಿಂದ ಅಲಂಕರಿಸಿ, ರಥದ ಮೇಲೆ ಕೂಡ್ರಿಸಿದರೂ. ಆಗ ಎಲ್ಲರಿಗೂ ಆನಂದವಾಯಿತು. ಆ ಸತೇಜ ಸಿದ್ಧಮೂರ್ತಿಯು, ತಾರಾಂಗಣದ ಮಧ್ಯದಲ್ಲಿ ಚಂದ್ರನು ಶೋಭಿಸುವಂತೆ, ಅಥವಾ ಮೇಘಗಳ ನಡುವೆ ವಿದ್ಯುಲ್ಲತೆಯಂತೆ, ರಥದ ಮೇಲೆ

ವಿರಾಜಿಸುತ್ತಿತ್ತು. ಸದ್ಗುರು ಮುಖದ ಮೇಲಿನ ಶಾಂತಿಯ ತೇಜವು ಭಕ್ತಮುಖ ಕಮಲಗಳಿಗೆ ಸೂರ್ಯಬಿಂಬದಂತೆ ಕಾಣಿಸುವಂಥಾದ್ದಾಯಿತು. ಆ ಸದ್ಗುರು ಮುಖವನ್ನು ನೋಡುತ್ತ ನೋಡುತ್ತ, ಸರ್ವಾಂತರದಲ್ಲಿ ಆನಂದ ಉಕ್ಕುತ್ತ ಬರಲಾರಂಬಿಸಿತು. ಆಗ ಸುವಾಸಿನಿ ಸ್ತ್ರೀಯರು ಬಂದು, ಮುಖದಿಂದ ಮಂಗಳಾರತಿಯನ್ನು ಸುಸ್ವರದಿಂದ ಹಾಡುತ್ತ ಪಂಚಾರತಿಯನ್ನು ಬೆಳಗುವಂಥವರಾದರು. ಎಲ್ಲರೂ ಜಯ ಜಯಕಾರದ ಗರ್ಜನೆ ಮಾಡುತ್ತಿರುವರು. ಈಗ ರಥಕ್ಕೆ ಹಸ್ತ ಸ್ಪರ್ಶಿಸಿದ ಮಾತ್ರದಿಂದ ರಥವು ಮುಂದೆ ನಡಿಯಲಾರಂಭಿಸಿತು. ನಿಂದಕರಲ್ಲರೂ ಈ ಚಮತ್ಕಾರವನ್ನು ನೋಡಿ ಭ್ರಮೆಗೊಂಡರು. ಎಲ್ಲರೊಳಗೂ ಆಶ್ಚರ್ಯ ಹಿಡಿಸಲಾರದಂತಾಯಿತು, ಯಾವ ಪ್ರಕಾರ ನದಿಗೆ ಮಹಾಪೂರ ಬಂದಿರುವಾಗ, ಗಿಡಗಳೂ ಕಲ್ಲುಗಳೂ ಎಲ್ಲಾ ಕೂಡಿ ಹರಿದು ಹೋಗುತ್ತವೆಯೋ ಅದೇ ಪ್ರಕಾರ ಇಲ್ಲಿ ಆನಂದದ ಪ್ರವಾಹ ಬಂದಿದ್ದು, ಎಲ್ಲ ಭಕ್ತರೂ ಅಭಕ್ತರೂ ಅದರೊಳಗೆ ಕೂಡಿ ಹೋಗವಂಥವರಾದರು. ರಥ

ನಡೆಯುತ್ತಿರುವಾಗ, ಎಲ್ಲಾ ಜನರು ನಾಮ ಘೋಷವನ್ನು ಮಾಡುತ್ತಿದ್ದರು. ವಂದಕರೂ ನಿಂದಕರೂ, ಸಿದ್ಧರ ಮುಖಾವಲೋಕನದಿಂದ ಸಮಾನವಾಗಿ ಆನಂದ ಪಡುವಂಥವರಾದರು. ಉತ್ಸವ ಸಮಾಪ್ತವಾಯಿತು. ಆಗ ಎಲ್ಲರೂ ಸದ್ಗುರುಗಳ ಸಮೀಪ ಬಂದು, ಅವರ ಚರಣಗಳಿಗೆ ನಮಸ್ಕರಿಸುತ್ತಿರುವ ಸಮಯದಲ್ಲಿ, ಅಪೂರ್ವ ಸಂದಣಿಯಾಯಿತು. ಆಮೇಲೆ ಸದ್ಗುರುರಾಯರು ಸಿದ್ಧಾಶ್ರಮಕ್ಕೆ ಹೋಗಿ,

ಯಥಾಪೂರ್ವ ಕಟ್ಟೆಯ ಮೇಲೆ ಕುಳಿತುಕೊಂಡು, ತನ್ನೊಳಗೆ - "ಇದೆಲ್ಲಾ ಈಶ್ವರೀ ಮಾಯಾ ಇರುತ್ತದೆ. ಇದರೊಳಗೆ ನನ್ನ ದೇನೇನೂ ಇಲ್ಲ. ಈ ಜಾಗ್ರತ್ ಪ್ರಪಂಚವಾದರೂ ಸ್ವಪ್ನವತ ಇರುವುದು. ಇದರೊಳಗೆ ಸತ್ಯ ಏನೇನೂ ಇರುವದಿಲ್ಲ. ಎಲ್ಲವೂ ನಾನೇ ಆಗಿ, ನನ್ನೊಳಗೆ ನಾನೇ ಆಡುತ್ತಿರುವೆನು," ಎಂದು ಆಲೋಚಿಸುತ್ತಿದ್ದರು. ಇದೇ ಸಮಯದಲ್ಲಿ,

ಆ ಆರು ಮಂದಿ ಯವನರು ಬರುವುದನ್ನು ಸಿಧ್ಧರು ಕಂಡು, - "ನೀವು ಈಗಲೇ ಬಂದಿರಿ, ಒಳ್ಳೇದಾಯಿತು. ನಿಮ್ಮ ಕೆಲಸ ಈಗಲೇ ತೀರಿಸಿಕೊಳ್ಳಿರಿ. ನೀವು ಆಗ ಚೆಲ್ಲಿ ಬಿಟ್ಟ ಕಲ್ಲು, ಅಲ್ಲಿ ಅದೇ. ಈಗ ನಿಮಗೆ ಏನೇನೂ ಭೀತಿ

ಇಲ್ಲ. ನಿಮ್ಮ ಮನೋರಥವನ್ನು ನಿರ್ಭಯ ಚಿತ್ತರಾಗಿ ಪೂರೈಸಿಕೊಳ್ಳಿರಿ, ಯವನರೇ," ಅಂದರು. ಸಿಧ್ಧರು ಹೀಗನ್ನುತ್ತಿರುವಾಗ, ಆ ಯವನರು ಸಿದ್ದರ ಸಮೀಪ ಬಂದು, ಅವರ ಚರಣಗಳಿಗೆ ನಮಸ್ಕರಿಸಿ - "ನಮ್ಮನ್ನು ಕ್ಷಮಿಸಿರಿ. ನಿಮ್ಮನ್ನು ಬಹಳ ಕಾಡಿದೆವು. ನಾವು ಮಹಾ ಪಾಪಿಷ್ಟರಿದ್ದೇವೆ. ನೀವು ಹುಚ್ಚನಂತೆ ನಮಗೆ ಕಾಣಿಸಿಕೊಂಡಿರಿ,  ಎಂದು ನಿಮ್ಮನ್ನು ಬಹಳ ಹೊಡೆದೆವು. ನೀವು ನಿಜವಾಗಿ ಮಹಾತ್ಮರಿದ್ದೀರಿ ಎಂದು ನಮಗೆ ಈಗ ತಿಳಿಯಿತು. ನಮಗೀಗ ಯೋಗ್ಯ ಶಿಕ್ಷೆಯನ್ನು ನೀವು ಮಾಡತಕ್ಕದ್ದು. ನಮಗೆ ಯೋಗ್ಯವಾದ ದಂಡನೆ ಮಾಡದ ವಿನಹಾ, ನಾವು ಇಲ್ಲಿಂದ ಹೋಗಲಾರೆವು", ಎಂದು ಹೇಳಿದ್ದನ್ನು ಕೇಳಿ, ಸಿದ್ದರು ಅವರನ್ನು ಕುರಿತು, -"ನೀವು ಈಗ ಸದ್ಗುಣಗಳನ್ನು ಕೈಕೊಂಡಿರಿ. ನಿಮಗೆ

ಯಾವಾಗ ಸದ್ಗುಣಗಳು ಬಂದವೋ ಆಗಲೇ ನಮ್ಮ ಕಾರ್ಯವು ಮುಗಿಯಿತು. ನಿಮ್ಮ ಹೊಡೆತಗಳನ್ನು ಸಹಿಸಿದ್ದು ಸಫಲವಾಯಿತು. ಏನೂ ಚಿಂತೆ ಮಾಡಬೇಡಿರಿ. ಈಗ ನೀವು ಮನೆಗೆ ಹೋಗಿ, ನಿಮ್ಮ ಧರ್ಮವನ್ನು ಅನುಸರಿಸಿ ನಡೆಯಿರಿ. ಮದ್ಯಪಾನಾದಿ ವಿಷಯಗಳನ್ನು ತ್ಯಾಗ ಮಾಡಿರಿ, ಇದೆ ನಿಮಗೆ ಯೋಗ್ಯ ಶಿಕ್ಷೆಯಾಗಿರುತ್ತದೆ." ಎಂದು ಹೇಳಿದ್ದು ಕೇಳಿ, ಆ ಯುವನರು ಸದ್ಗುರುಗಳ ಮುಂದೆ ಸಾಷ್ಟಾಂಗವನ್ನು ಹಾಕುತ್ತ, ಬಹು ಅನುತಾಪಯುಕ್ತರಾಗಿ, ಫಳಫಳನೆ ಅಳಲಾರಂಭಿಸಿ ಸಿದ್ಧರಿಗೆ- "ಹೇ ದಯಾಳುವಾದ ಸಿದ್ಧರಾಯನೇ, ದುಷ್ಟರಾದ ನಮ್ಮ ಮೇಲೆ ನೀನು, ದಯಾ ಮಾಡಿರುವಿ. ನಾವು ಪೂರ್ವ ಪುಣ್ಯದಿಂದ ನಿನ್ನ ಚರಣಗಳನ್ನು ಹೊಂದಿದೆವು, ಇಲ್ಲದಿದ್ದರೆ ವ್ಯರ್ಥವಾಗಿ ಹೋಗುತ್ತಿದ್ದೆವು. ಈಗ ನಮ್ಮನ್ನು ಕೃಪಾಹಸ್ತದಿಂದ ಉದ್ಧರಿಸತಕ್ಕದ್ದು. ನಮ್ಮ ದುಷ್ಟ ಸಂಗವನ್ನು ತಪ್ಪಿಸಿ, ನಮಗೆ ಸತ್ಸಂಗವನ್ನೇ ಕೊಡುವಂಥವನಾಗು," ಎಂದು ಈ ಪ್ರಕಾರ ಪ್ರಾರ್ಥಿಸಿ, ತಮ್ಮ ಸ್ವಸ್ಥಾನಕ್ಕೆ ಹೋಗುವಂಥವರಾದರು.

ಹೇ ಶ್ರೋತಾ ಜನರುಗಳಿರಾ, ಈಗ ಕಥೆಯ ಲಕ್ಷ್ಯಾರ್ಥವನ್ನು ಕೇಳುವಂಥವರಾಗಿರಿ, ಸಿದ್ಧರಾಯನೇ ಆತ್ಮನು ಇದ್ದು, ಅಹಂ ಎಂಬ ಕಟ್ಟೆ ಮೇಲೆ ಕುಳಿತಿರುವಾಗ, ಅಲ್ಲಿ ಬಂದ ಯವನರೇ ಷಡ್ರಿಪುಗಳು. ಇವುಗಳು ವಿಷಯವೆಂಬ ಮದ್ಯ ಸೇವನೆಯಿಂದ ಮತ್ತರಾಗಿದ್ದು, ಅದನ್ನೆ ಆತ್ಮನಿಗೆ ಕೊಡಲಿಕ್ಕೆ ಯತ್ನಿಸಿದಾಗ, ಆತ್ಮನು ನಿಷ್ಕಾಮ ಮತ್ತು ಅಲಿಪ್ತನಿದ್ದು,

ವಿಷಯಗಳನ್ನು ಸೇವಿಸಲೊಲ್ಲನು. ಆಗ ಅವರು ದುಷ್ಟ ವೃತ್ತಿಗಳೆಂಬ ಕಟ್ಟಿಗೆಗಳಿಂದ ಹೊಡಿಯುವರು. ಮತ್ತು ವಿಷಯ ಮದ್ಯವನ್ನು ಸೇವಿಸಲಿಕ್ಕೆ ಆತ್ಮನಿಗೆ ಬಲಾತ್ಕಾರ ಮಾಡುವರು. ಆದರೆ ನಿರ್ಲೇಪಕ್ತನಾದ ಆತ್ಮನು ಶಾಂತವೃತ್ತಿಯಿಂದ ಇದ್ದು , ಎಂದು ಚಲನವಾಗಲಾರನು. ಅದೇ ಸಮಯದಲ್ಲಿ, ವಿವೇಕ, ವೈರಾಗ್ಯ, ಕ್ಷಾಮ ಇತ್ಯಾದಿ ಭಕ್ತ ಜನರು, ಧೈರ್ಯ, ಶಮದಮಾದಿ ಸದ್ಗುಣರೂಪ ಸಜ್ಜನರು ಬಂದದ್ದು ನೋಡಿ, ದುರ್ಗುಣಿಗಳಾದ ಷಡ್ರಿಪುಗಳು ಓಡಿಹೋದರು. ಸದ್ಗುಣಗಳೆಲ್ಲಾ ಪ್ರಾರ್ಥಿಸಿ ಆತ್ಮನನ್ನು, ಸ್ಥೂಲ ಸೂಕ್ಷ್ಮ ರಥದ ಕಡೆಗೆ ಕರೆದುಕೊಂಡು ಹೋಗಿ, ಆತನನ್ನು

ಪ್ರತ್ಯೇಕ ಕೂಡ್ರಿಸಲು, ರಥವು ಜಡರೂಪವಾಗಿದ್ದು ಚಲನರಹಿತವಾಯಿತು. ಅನೇಕ ವಿಷಯ ವೃತ್ತಿಗಳು ಕೂಡಿ, ಆ ದೇಹ ರಥವನ್ನು ಎಳೆಯಲು ನೋಡಿದಾಗ ಅದು ನಡಿಯದು, ಎಂದು ತಿಳಿದವು, ಆಗ ಸದ್ಗುರು ಎಂಬ ಗೃಹಸ್ಥನು ಬಂದು ಅವರನ್ನು ಕುರಿತು - "ಆತ್ಮನ ಹೊರತು, ದೇಹವು ಚಲಿಸಲಾರದು," ಎಂದು ಅಂದದ್ದು ಕೇಳಿ, ದೇಹ ರಥದ ಮೇಲೆ, ಆತನನ್ನು ಕೂಡ್ರಿಸಿದ ಕೂಡಲೇ ರಥವು ನಡೆಯಲಾರಂಭಿಸಿತು. ಅನಂತರ ಆತ್ಮನು ತನ್ನ ಪೂರ್ವ ಸ್ಥಿತಿಯಲ್ಲಿರುವಂಥವನಾದನು. ಆಗ ಆ ಷಡ್ರಿಪುಗಳು ಬಂಧು, ಆತ್ಮನನ್ನು ಕುರಿತು "ನಾವು ಉನ್ಮತ್ತರಾಗಿ ನೀನು ಜೀವನೆಂದು ತಿಳಿದೇವು ನಮ್ಮನ್ನು ಕ್ಷಮಿಸಬೇಕು," ಎಂದು ಅನ್ನುವದು ಕೇಳಿ, ಆತ್ಮನು ಅವರಿಗೆ ಅಭಯವನ್ನು ಕೊಟ್ಟು, ಅವರ ದುರ್ವೃತ್ತಿಯನ್ನು ಬಿಡಿಸಿ, ಸದ್ ವೃತ್ತಿಯನ್ನು ಹಚ್ಚಿ, ದುರ್ಗುಣಗಳನ್ನು ಶುದ್ಧ ಮಾಡಿ ಆತ್ಮನು ಸ್ವರಾಜ್ಯವನು ಸುಖದಿಂದ ಮಾಡುವಂಥವನಾದನು, ಎಂಬಲ್ಲಿ ಶ್ರೀ ಸಿದ್ಧಾರೂಢ ಕಥಾಮೃತದೊಳ, ಶ್ರವಣ ಮಾತ್ರದಿಂದ ಸರ್ವ

*ಪಾಪಗಳನ್ನೆಲ್ಲಾ ಭಸ್ಮ ಮಾಡುವಂಥ ಅತಿ ಮಧುರವಾದ ಈ ಇಪ್ಪತ್ತಾರನೇ ಅಧ್ಯಾಯವನ್ನು ಶಿವದಾಸನು ಶ್ರೀ ಸಿದ್ಧಾರೂಢ ಸದ್ಗುರುಗಳ ಚರಣಾರವಿಂದಗಳಲ್ಲಿ ಅರ್ಪಿಸುತ್ತಿರುವನು.*